


'ಹವಳ ಸುಂದರಿ'ಯ ಪಕ್ಷಿನೋಟ



ಸ್ನಾರ್ಕ್ಲಿಂಗ್ ವೇಳೆ ಕಂಡ ರೀಫ್ ಶಾರ್ಕ್



ಲೇಡಿ ಮಸ್‌ಗ್ರೇವ್ ಕಡಲ ಕಿನಾರೆ

ಸೌಂದರ್ಯವನ್ನು ತೋರುತ್ತ ಪ್ರತ್ಯಕ್ಷವಾದ 'ಲೇಡಿ ಮಸ್‌ಗ್ರೇವ್' (**Lady Musgrave**) ಹವಳ ಸುಂದರಿಯನ್ನು ನೋಡಿದಾಗ ಮೈಯಲ್ಲಿ ಪುಳಕ! ದೋಣಿಯ ಕ್ಯಾಪ್ಟನ್ ನಮಗೆಲ್ಲ ದಕ್ಷಿಣ ಗ್ರೇಟ್ ಬ್ಯಾರಿಯರ್ ರೀಫ್ ಮತ್ತು ಲೇಡಿ ಮಸ್‌ಗ್ರೇವ್ ಹವಳ ದ್ವೀಪಕ್ಕೆ ಸ್ವಾಗತ ಕೋರಿದಾಗ ಬಹುದಿನಗಳ ಕನಸು ಈಡೇರುವ ಕ್ಷಣಗಳು ಹತ್ತಿರವಾಗಿ ಮನಸ್ಸು ಸಂಭ್ರಮಿಸಿತು!

ಇಡೀ ದ್ವೀಪವು ಹವಳದಿಂದ ನಿರ್ಮಿತವಾಗಿದೆ. ಮಣ್ಣಿನ ಪದರಗಳು ಕೂಡ ಹವಳದಿಂದಲೇ ಉಂಟಾಗಿರುವುದು, ಹವಳವೇ ಇಲ್ಲಿನ ಸಾವಯವ ವಸ್ತು. ಅದರಿಂದಲೇ ಬೆಳೆದಿರುವ ವಿಶಿಷ್ಟ ಮರಗಿಡಗಳು. ಇಲ್ಲಿ ವಾಸಿಸುವ ನಾಡೀಸ್ (**Noddies**) ಎಂಬ ಪಕ್ಷಿಸಂಕುಲ ಕೂಡ ಹವಳದೊಂದಿಗೆ ಬೆಸೆದುಕೊಂಡಿದೆ. ಇದನ್ನು ಸಾಬೀತು ಮಾಡಲೆಂಬಂತೆ ಎಲ್ಲರೂ ಲೇಡಿ ಮಸ್‌ಗ್ರೇವ್ ದ್ವೀಪವನ್ನು 'ಹವಳ ಸುಂದರಿ' ಎನ್ನುತ್ತಾರೆಂದು ನಮ್ಮ ಕ್ಯಾಪ್ಟನ್ ದ್ವೀಪವನ್ನು ಪರಿಚಯಿಸಿದಾಗ ನಾವೆಲ್ಲರೂ ತಲೆದೂಗಿದೆವು. ಇಲ್ಲಿ ಹವಳವೇ ನಿತ್ಯ, ಹವಳವೇ ಸತ್ಯ!

ಆಸ್ಟ್ರೇಲಿಯಾದ ಪೂರ್ವ ತೀರದಲ್ಲಿರುವ ಕ್ವೀನ್ಸ್‌ಲ್ಯಾಂಡ್ ರಾಜ್ಯದ ರಾಜಧಾನಿ ಬ್ರಿಸ್ಬೇನ್ ನಗರದ ಉತ್ತರಕ್ಕೆ 380 ಕಿ.ಮೀ. ದೂರದಲ್ಲಿ ಬಂಡಬರ್ಗ್ ಪಟ್ಟಣವಿದೆ. ಸುಮಾರು 5 ಗಂಟೆಗಳ ಕಾರು ಪ್ರಯಾಣ. ವಿಮಾನ, ರೈಲು ಮತ್ತು ಬಸ್ ಸಾರಿಗೆ ಅನುಕೂಲಗಳೂ ಇವೆ. ಬಂಡಬರ್ಗ್ ಪಟ್ಟಣದಿಂದ 14 ಕಿ.ಮೀ. ದೂರದಲ್ಲಿರುವುದು ಮನಮೋಹಕ ಕೋರಲ್ ಸಮುದ್ರ. ಈ ಸಮುದ್ರತೀರವು ಪ್ರಪಂಚ ಪ್ರಸಿದ್ಧವಾದದ್ದು. ಏಕೆಂದರೆ ಇದೇ ತೀರದಲ್ಲಿರುವುದು **Mon Repos** ಎನ್ನುವ ಸಮುದ್ರ ಆಮೆಗಳ ಸಂರಕ್ಷಣಾ ಕೇಂದ್ರ.

ಈ ವಿಶ್ವವಿಖ್ಯಾತ ಸಮುದ್ರತೀರಕ್ಕೆ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಲಾಗರ್ ಹೆಡ್ ಸಮುದ್ರ ಆಮೆಗಳು ಮೊಟ್ಟೆಯಿಡಲು ಬರುತ್ತವೆ. ಮೊಟ್ಟೆಗಳೊಡೆದು ಹೊರಬರುವ ಪುಟ್ಟಪುಟ್ಟ ಮರಿ ಆಮೆಗಳು ಸಮುದ್ರವನ್ನು ಸೇರುತ್ತವೆ. ಸುಮಾರು ಐದು ತಿಂಗಳು ನಡೆಯುವ ಈ ಎರಡೂ ಹಂತಗಳನ್ನು ನೋಡಲು ಸಾವಿರಾರು ಜನ ಬರುತ್ತಾರೆ. ಆಮೆಗಳ ಸಂರಕ್ಷಣಾ ಕೆಲಸದ ಜೊತೆಗೆ ಕೇಂದ್ರವು ದಕ್ಷಿಣ ಗ್ರೇಟ್ ಬ್ಯಾರಿಯರ್ ರೀಫ್ ಆರೋಗ್ಯವನ್ನು ಕಾಪಾಡಲು ಶ್ರಮಿಸುತ್ತಿದೆ.

ಲೇಡಿ ಮಸ್‌ಗ್ರೇವ್ ದ್ವೀಪವಲ್ಲದೆ ಲೇಡಿ ಎಲಿಯಟ್ ಎನ್ನುವ ಇನ್ನೂ ದೊಡ್ಡದಾದ ದ್ವೀಪವು ಗ್ರೇಟ್ ಬ್ಯಾರಿಯರ್ ರೀಫ್ ಗರ್ಭದೊಳಗೇ ಇದೆ. ಅಲ್ಲಿಗೆ ವಿಮಾನ ಅಥವಾ ಹಡಗು ಪ್ರಯಾಣದಿಂದ ಮಾತ್ರ ತಲುಪಲು ಸಾಧ್ಯ. ಅಲ್ಲದೆ ಬಲು ದುಬಾರಿ. ಹಾಗಾಗಿ ಹೆಚ್ಚಿನವರು ಲೇಡಿ ಮಸ್‌ಗ್ರೇವ್ ದ್ವೀಪ ಆರಿಸಿಕೊಳ್ಳುತ್ತಾರೆ. ಈ ದ್ವೀಪಕ್ಕೆ ಪ್ರತಿದಿನ ಬೆಳಿಗ್ಗೆ ಎರಡು ಪ್ರವಾಸಿ ದೋಣಿಗಳು ಹೊರಡುತ್ತವೆ. ಟಿಕೆಟ್ ಮುಂಗಡ ಬುಕಿಂಗ್ ಸುಲಭ.

ಅಸದಳ ಸೌಂದರ್ಯದ ಕೋರಲ್ ಸಮುದ್ರದಲ್ಲಿ ಸಾಗುತ್ತಾ ದಕ್ಷಿಣ ಗ್ರೇಟ್ ಬ್ಯಾರಿಯರ್ ರೀಫ್‌ನಲ್ಲಿ ಪವಡಿಸಿ ತನ್ನ ಲಾವಣ್ಯದಿಂದ ಮರುಳು ಮಾಡುವ ಲೇಡಿ ಮಸ್‌ಗ್ರೇವ್ ಹವಳ ದ್ವೀಪವನ್ನು ನಮ್ಮ ಪ್ರವಾಸಿ ದೋಣಿ ಸಮೀಪಿಸಿ ಇನ್ನೂ ಒಂದು ಕಿ.ಮೀ. ಇರುವಾಗ ಅಲ್ಲಿಯೇ ಆಳದ ನೀರಿನಲ್ಲಿ ಲಂಗರು ಹಾಕಿತು. ಆ ಕಡೆ ಒಂದಷ್ಟು ದೂರದಲ್ಲಿ ಎರಡನೇ ದೊಡ್ಡ ಪ್ರವಾಸಿ ದೋಣಿ ಮತ್ತು ಅಲ್ಲಿಯೇ ಕಾಯಂ ಸ್ಥಾಪಿತವಾಗಿರುವ ತೇಲುವ ಡಾಕ್ ಅಥವಾ **pontoon** ಸ್ಟೇಷನ್ ಕಂಡಿತು. ನಮ್ಮ ದೋಣಿಯ ಸಿಬ್ಬಂದಿ ನಮ್ಮನ್ನು ಎರಡು ತಂಡಗಳಾಗಿ ವಿಭಜಿಸಿದರು. ಒಂದು ತಂಡ ದ್ವೀಪಕ್ಕೆ ಭೇಟಿ ಕೊಡುವುದು, ಮತ್ತೊಂದು ತಂಡ ಸ್ನಾರ್ಕ್ಲಿಂಗ್ (**snorkelling**) ಸಾಹಸಕ್ಕೆ ನೀರಿನಲ್ಲಿಳಿಯುವುದು. ಅನಂತರ ಎರಡೂ ತಂಡಗಳನ್ನು ಅದಲುಬದಲು ಮಾಡಿ ಎಲ್ಲರಿಗೂ ಎರಡೂ ಅನುಭವಗಳು ದಕ್ಕುವಂತೆ ಆಯೋಜಿಸಲಾಯಿತು. ತಂಡಗಳನ್ನು ಗುರುತಿಸಲು ಮೊದಲೇ ನಮಗೆ ಹಸಿರು ಮತ್ತು ಕೇಸರಿ ಬಣ್ಣಗಳ ಮಣಿಕಟ್ಟು ಪಟ್ಟಿ ಕೊಟ್ಟಿದ್ದರು.

ನಾನು ಮೊದಲು ದ್ವೀಪಕ್ಕೆ ಭೇಟಿ ಕೊಡುವುದು, ಆ ಉರಿಯುವ ಬಿಸಿಲಲ್ಲಿ ನಡೆದಾಡಿ ಸುಸ್ತಾದಾಗ ದೋಣಿಗೆ ಮರಳಿ ಸ್ನಾರ್ಕ್ಲಿಂಗ್‌ಗಾಗಿ ನೀರಲ್ಲಿಳಿಯುವುದು ಎಂದು ನಿಶ್ಚಯಿಸಿದೆ. ದ್ವೀಪಕ್ಕೆ ಹೋಗಲು ನಮ್ಮನ್ನು ಮತ್ತೊಂದು ದೋಣಿಗೆ ರವಾನಿಸಿದರು. ಈ ದೋಣಿಯಲ್ಲಿ ಒಂದು ವಿಶೇಷವಿತ್ತು. ದೋಣಿಯ ಮಧ್ಯದಲ್ಲಿದ್ದ ಭಾಗಕ್ಕೆ ಗಾಜಿನ ತಳವಿತ್ತು. ಹೋಗುತ್ತಾ ಬರುತ್ತಾ ನಾವು ಕುಳಿತ ಜಾಗದಿಂದ ಬಗ್ಗಿ ನೋಡಿದರೆ ಗಾಜಿನ ಮೂಲಕ ಕೆಳಗೆ ಸಮುದ್ರದಲ್ಲಿ ಹರಡಿಕೊಂಡಿದ್ದ ಹವಳ ಗೋಡೆಗಳು, ಕಿರಿ ಗುಡ್ಡಗಳು ಕಾಣಿಸಿದವು. ಹಾಗೇ ನೋಡುತ್ತಿದ್ದರೆ ಈಜಾಡುತ್ತಿದ್ದ ಆಮೆಗಳು, ರೀಫ್ ಶಾರ್ಕ್, ನಾನಾ ವಿಧಗಳ ಮೀನುಗಳು, ಒಂದೆರಡು ಮಂಟಾ ರೇಗಳು ಕಂಡವು.

ದ್ವೀಪದ ದಡ ತಲುಪಿ ದೋಣಿಯಿಂದಿಳಿದು ನೀರಿನಲ್ಲಿ ಕಾಲಿಟ್ಟಾಗ ಆಶ್ಚರ್ಯವಾಗುವಷ್ಟು ಬೆಚ್ಚಗಿನ ನೀರು. ಹೆಜ್ಜೆಯಿಟ್ಟು ನಡೆದರೆ ಗಾಜು ತುಂಡುಗಳ ಮೇಲೆ ನಡೆದಾಗ ಬರುವ ಜರಕ್ ಜರಕ್ ಶಬ್ದ. ಕೆಳಗೆ ನೋಡಿದರೆ ಕಂಡಿದ್ದು ಬಿಳಿಚಿಕೊಂಡು ನಿರ್ಜೀವವಾಗಿ ಹರಡಿಕೊಂಡಿದ್ದ ಹವಳದ ನಾನಾ ಗಾತ್ರದ ತುಂಡುಗಳು. ದಡದ